**OS.306/2013**
**PW-2**

**ದಿನಾಂಕಃ 20.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿ**ವಾದಿ ಪರ ಶ್ರೀ.** ಎ.ಎಲ್.ಎಸ್ **ವಕೀಲರಿಂದಃ**

ನಾನು ಹುಟ್ಟಿ ಬೆಳೆದಿದ್ದು ಕಗ್ಗಲೀಪುರದಲ್ಲಿ ಎಂದರೆ ಸರಿ. ನಾನು ವಾದಿ ಮತ್ತು ಪ್ರತಿವಾದಿಗಳ ಮನೆಯನ್ನು ನೋಡಿದ್ದೇನೆ. ವಾದಿಗಳ ಮನೆಯ ಚೆಕ್ಕುಬಂಧಿ ಪೂರ್ವಕ್ಕೆ ಖಾಲಿ ಜಾಗ , ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ಗಲ್ಲಿ ನಂತರ ಕೆಂಚೇಗೌಡರವರ ಮನೆ , ದಕ್ಷಿಣಕ್ಕೆ ನಮ್ಮ ಮನೆ ಬರುತ್ತದೆ . ಪ್ರತಿವಾದಿಗಳ ಮನೆಯ ಚೆಕ್ಕುಬಂಧಿ ಪೂರ್ವಕ್ಕೆ ಲೋಕೇಶ್ ರವರ ಮನೆ , ಪಶ್ಚಿಮಕ್ಕೆ ಪ್ರತಿವಾದಿಗಳ ಖಾಲಿ ಜಾಗ , ಉತ್ತರಕ್ಕೆ ರಸ್ತೆ , ದಕ್ಷಿಣಕ್ಕೆ ವಾದಿಗಳ ಖಾಲಿ ಜಾಗ. ಪ್ರತಿವಾದಿಗಳು ಮತ್ತು ಲೋಕೇಶ್ ರವರ ನಡುವೆ ಯಾವುದೆ ಸಂಬಂಧವಿರುವುದಿಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಗಳ ಚಿತಾವಣೆ ಮೇರೆಗೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಲಯ, ಟಿ ನರಸಿಪುರ